ಶ್ರೀ ವಂಸತ ಎ. ಸಾಲಿಯಾನ್.—ಇದು ಜಿಲ್ಲಾ ಪರಿಷತ್‌ಗೆ ಸೇರಿದ್ದರೂ ಸಹ ಸರ್ಕಾರ ಮಂಜೂರಾತಿ ಪಡೆಯುತ್ತದೆ, ಸರ್ಕಾರ ಮಂಜೂರಾತಿ ಮಾಡಿ, ಜಿಲ್ಲಾ ಪರಿಷತ್‌ಗೆ ಕಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ಮಂಜೂರಾತಿಯನ್ನು ಕೊಡತಕ್ಕಂಥ ಅಧಿಕಾರವನ್ನು ಕಾನೂನು ಪ್ರಕಾರ ಸರ್ಕಾರ ಇಟ್ಟುಕೊಂಡಿಲ್ಲ.

ರೇಷ್ಮೆ ಕೈಗಾರಿಕೆ

೧೩೯೧. ಶ್ರೀ ಜಿ ರಾಜುಗೌಡ (ಹನೂರು) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಇಂಡಸ್ಟ್ರೀಸ್ ಕಾರ್ಪೊರೇಷನ್ (ಕೆ.ಎಸ್.ಐ.ಸಿ.) ಎಂದಿನಿಂದ ಅಸ್ತಿತ್ವಕ್ಕೆ ಬಂದಿತು ?

ಆ) ಇದರ ಮೂಲ ಬಂಡವಾಳವೇನು ?

ಇ) ಈ ಸಂಸ್ಥೆಯಿಂದ ರೇಷ್ಮೆ ಕೈಗಾರಿಕೆಗೆ ಯಾವ ರೀತಿ ಪ್ರಯೋಜನವಾಗಿದೆ ?

ಈ) ಪ್ರಾರಂಭದಿಂದ ಈ ಸಂಸ್ಥೆಯು ಗಳಿಸಿರುವ ಲಾಭ ಮತ್ತು ನಷ್ಟವೇನು ?

ಶ್ರಿ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಸಚಿವರು).—

ಅ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತ ಸಂಸ್ಥೆಯು ದಿನಾಂಕ ೧೨-೦೪-೧೯೮೦ ರಲ್ಲಿ ಅಸ್ತಿತ್ವಕ್ಕೆ ಬಂದಿತು, ಹಾಗೂ ತನ್ನ ವಾಣಿಜ್ಯ ವ್ಯವಹಾರದ ದೃಢೀಕರಣವನ್ನು ದಿನಾಂಕ ೦೬-೦೪-೧೯೮೧ ರಿಂದ ಜಾರಿಗೆ ಬರುವಂತೆ ಪಡೆದಿದೆ.

ಆ) ಅಧಿಕೃತ ಷೇರು ಬಂಡವಾಳ—ರೂ. ೧೫೦೦ ಲಕ್ಷಗಳು ಪಾವತಿಸಿರುವ ಬಂಡವಾಳ—ರೂ. ೯೦೫ ಲಕ್ಷಗಳು.

ಇ) ಅ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತವು ರೇಷ್ಮೆ ಕೈಗಾರಿಕಾ ಸಂಸ್ಕರಣ ಕಾರ್ಯಕ್ಷೇತ್ರದಲ್ಲಿ ಅಗ್ರಗಣ್ಯ ಸಂಸ್ಥೆಯಾಗಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳಿಂದ ಆಮದು ಮಾಡಲ್ಪಟ್ಟ ಯಂತ್ರೋಪಕರಣಗಳನ್ನು ಸ್ಥಾವರೀಕರಿಸಿ ರೇಷ್ಮೆ ಉತ್ಪಾದನೆ ಮಾಡುತ್ತಿದೆ.

ಆ) ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ಪ್ರತಿ ವರ್ಷ ಸುಮಾರು ರೂ. ೩೦೦ ಲಕ್ಷ ಮೌಲ್ಯದ ಮಲ್ಬೇ ಪೋಲ್ಟಿನ್ ಮತ್ತು ಬೈವೋಲ್ಟಿನ್, ಗೂಡು ಗಳನ್ನು ಖರೀದಿ ಮಾಡುತ್ತದೆ. ತತ್ಪರಿಣಾಮವಾಗಿ ಕರ್ನಾಟಕ ರಾಜ್ಯದ ಸಾವಿರಾರು ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ಸಾಣಿದಾರರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟಂತಾಗಿದೆ.

ಇ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತವು ಸುಮಾರು ರೂ. ೧೫೦ ಲಕ್ಷದ ಕಚ್ಚಾ ಜೂಟು ರೇಷ್ಮೆ (ಸಿಲ್ಕ್ ವೇಸ್ಟ್‌ನ್ನು) ಖರೀದಿಸುವ ಪರಿಣಾಮವಾಗಿ ಅನೇಕ ರೇಷ್ಮೆ ಕೃಷಿಕರಿಗೆ ಹಾಗೂ ನೂಲು ತೆಗೆಯುವವರಿಗೆ ಉದ್ಯೋಗಾವಕಾಶ ಮಾಡಿಕೊಟ್ಟಿದೆ.

ಈ) ಮೈಸೂರು, ಚನ್ನಪಟ್ಟಣ, ಟಿ. ನರಸೀಪುರ ಹಾಗೂ ಕನಕಪುರ ಇಲ್ಲಿರುವ ತನ್ನ ನಿಗಮದ ಘಟಕಗಳ ಮೂಲಕ ಕರ್ನಾಟಕ ರಾಜ್ಯದ ೩೦೦೦ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿ ಕೊಡಲಾಗಿದೆ. ಇದಲ್ಲದೆ ಕರ್ನಾಟಕ ನೂರಾರು ಜನರು ಕೆ.ಎಸ್.ಐ.ಸಿ.ಯ ವಾಣಿಜ್ಯ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅವಲಂಬಿತರಾಗಿರುವರು.

ಈ) ಲಾಭ ಮತ್ತು ನಷ್ಟದ ವಿವರಗಳು ಈ ಕೆಳಕಂಡಂತೆ ಇರುವುದು.

(ರೂ. ಲಕ್ಷಗಳಲ್ಲಿ)

ವರ್ಷ	ಲಾಭ	ನಷ್ಟ
೧೯೮೧–೮೨	೧೫.೪೦	—
೧೯೮೨–೮೩	೪೩.೭೪	—
೧೯೮೩–೮೪	೨೬.೮೬	—
೧೯೮೪–೮೫	—	೨೭೭.೮೪
೧೯೮೫–೮೬	—	೩೪೦.೪೨
೧೯೮೬–೮೭	—	೪೨೫.೧೦

ಶ್ರೀ ಜಿ. ರಾಜೂಗೌಡ.—ಮಾನ್ಯ ಅಧ್ಯಕ್ಷರೇ, ಈ ನಮ್ಮ ಕರ್ನಾಟಕ ರಾಜ್ಯದ ರೇಷ್ಮೆ ಮತ್ತು ಕೃಷಿ ಪ್ರಪಂಚದಲ್ಲಿ ಈ ಕರ್ನಾಟಕ ರೇಷ್ಮೋದ್ಯಮಗಳ ನಿಗಮ ಒಂದು ಧೂಮಕೇತು ಆಗಿದೆ. ಏಕೆಂದರೆ ಇದರ ಬೂಲ ಬಂಡವಾಳ ೯ ಕೋಟಿ ರೂಪಾಯಿಗಳಾದರೆ, ನಷ್ಟ ಹತ್ತು ಕೋಟಿ ರೂಪಾಯಿಗಳು. ಇಲ್ಲಿ ನನ್ನ ಪ್ರಶ್ನೆ ಇಷ್ಟೆ,, ಟಿ. ನರಸೀಪುರದ ಘಟಕ ಏನಿದೆ, ಅಲ್ಲಿ ದಿನಕ್ಕೆ ಎಷ್ಟು ಕೆ. ಜಿ. ರೇಷ್ಮೆ ಗೂಡನ್ನು ಬೇಯಿಸಿ ರೇಷ್ಮೆ ನೂಲನ್ನು ಉತ್ಪಾದನೆ ಮಾಡಲಾಗುತ್ತಿದೆ, ಅದರ ಶಕ್ತಿಸಾಮರ್ಥ್ಯ ಎಷ್ಟು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲಿ ಒಂದೊಂದು ಘಟಕಗಳ ಬಗ್ಗೆ ವಿವರಣೆಯನ್ನು ಕೇಳುವುದಕ್ಕೆ ಬರುವುದಿಲ್ಲ. ಈ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಶ್ರೀ ಜಿ. ರಾಜುಗೌಡ.—ಕರ್ನಾಟಕ ರೇಷ್ಮೋದ್ಯಮಗಳ ನಿಗಮಕ್ಕೆ ಈ ಟಿ. ನರಸೀಪುರದ ಘಟಕವೂ ಸಹ ಸೇರಿರುವುದರಿಂದ, ಇದನ್ನು ಏತಕ್ಕೆ ಸ್ಥಾಪನೆ ಮಾಡಿದ್ದಾರೆಂಬುದನ್ನು ತಾವು ತಿಳಿದುಕೊಂಡಿರಬೇಕು. ಈ ಘಟಕದ ಸ್ಥಾಪನೆಗೆ ೨೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದರಲ್ಲಿ ಸರ್ಕಾರದ ಬಂಡವಾಳ ಅಲ್ಲದೆ ಇತರೇ ಹಣಕಾಸು ಸಂಸ್ಥೆಗಳಿಂದ ಸಹ ಹಣ ಪಡೆದು ತೊಡಗಿಸಲಾಗಿದೆ. ಇದಕ್ಕೆ ಬೇಕಾದ ಆಧುನಿಕ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಸಲುವಾಗಿ ಅಧಿಕಾರಿಗಳು ಪರದೇಶಗಳಿಗೆ ಹೋಗಿ ಮಜಾ ಮಾಡಿಕೊಂಡು ಬಂದರು. ಇದರ ಜೊತೆಗೆ ಈ ಯಂತ್ರೋಪಕರಣಗಳ ಖರೀದಿ ಸಂಬಂಧದಲ್ಲಿ ಕಮಿಷನ್ ಸಹ ಪಡೆದುಕೊಂಡಿದ್ದಾರೆ. ಇಷ್ಟೆಲ್ಲಾ ಆದಮೇಲೂ ಸಹ ಅಲ್ಲಿ ಕೋಟಿಗಟ್ಟಲೆಯಷ್ಟು ಹಣ ನಷ್ಟವಾಗುತ್ತಿದೆ. ಅದಕ್ಕಾಗಿಯೇ ಈ ನಿಗಮ ಒಂದು ದೊಡ್ಡ ಧೂಮಕೇತು ಆಗಿದೆ ಎಂದು ನಾನು ಹೇಳಿದ್ದು. ಇವೊತ್ತು ಬೈವೋಲ್ಟಿನ್ ರೇಷ್ಮೆ ಸಂಬಂಧದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಪೈಪೋಟಿ ಇರುವುದರಿಂದ, ಒಳ್ಳೆಯ ಗುಣ ಮಟ್ಟದ ರೇಷ್ಮೆಯನ್ನು ಉತ್ಪಾದನೆ ಮಾಡುವ ಸಲುವಾಗಿ ಟಿ. ನರಸೀಪುರದಲ್ಲಿದ್ದ ಘಟಕವನ್ನು ವಿಸ್ತರಣೆ ಮಾಡಲಾಯಿತು ಮತ್ತು ಹೊಸ ಯಂತ್ರೋಪಕರಣಗಳನ್ನು ಅಳವಡಿಸಲಾಯಿತು. ಈ ಘಟಕವನ್ನು ವಿಸ್ತರಣೆ ಮಾಡುವುದಕ್ಕೆ ಮೊದಲೇ ನಮ್ಮ ರಾಜ್ಯದಲ್ಲಿ ಎಷ್ಟು ಕೆ.ಜಿ. ಗಳಷ್ಟು ಬೈವೋಲ್ಟಿನ್ ಗೂಡು ಲಭ್ಯವಾಗುತ್ತದೆ ಎಂಬುದನ್ನು ತಿಳಿದುಕೊಂಡು ನಂತರ ವಿಸ್ತರಣೆ ಮಾಡಬೇಕಾಗಿತ್ತು. ನಮ್ಮ ರಾಜ್ಯದಲ್ಲಿ ಎಷ್ಟು ಕೆ.ಜಿ. ಬೈವೋಲ್ಟಿನ್ ಗೂಡುಗಳನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ತಾವು ತಿಳಿಸಬೇಕು. ಇದು ತಮಗೆ ಗೊತ್ತಿಲ್ಲದಿದ್ದರೆ ಅದನ್ನು ತಿಳಿದುಕೊಂಡು ಹೇಳಬೇಕು. ಅಷ್ಟೇ ಅಲ್ಲ. ಇದರ ಮೇಲೆ ಅರ್ಧ ಗಂಟೆ ಕಾಲದ ಚರ್ಚೆಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಈ ನಿಗಮವನ್ನು ಯಾವ ಒಂದು ಉದ್ದೇಶಕ್ಕಾಗಿ ಸ್ಥಾಪನೆ ಮಾಡಲಾಯಿತು ಎಂಬುದಕ್ಕೆ ಇಲ್ಲಿ ವಿವರಣೆಯನ್ನು ಕೊಟ್ಟಿದ್ದೇನೆ. ಆದರೆ ಈಗ ಮಾನ್ಯ ಸದಸ್ಯರು ಈ ನಿಗಮಕ್ಕೆ ಸೇರಿದ ಒಂದೊಂದು ಘಟಕಗಳ ಬಗ್ಗೆ ವಿವರಣೆ ಕೇಳುತ್ತಿದ್ದಾರೆ. ಆದರೆ ಮೂಲ ಪ್ರಶ್ನೆಯನ್ನು ಈ ಉಪಪ್ರಶ್ನೆ ಉದ್ಭವವಾಗುವುದಿಲ್ಲ. ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಪೂರ್ಣವಾದ ವಿವರ ಕೊಡುತ್ತೇನೆಂದು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು.— ಮೂಲ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ. ರಾಜುಗೌಡ — ಮೂಲ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ಉತ್ತರ ತರಿಸಿಕೊಳ್ಳಲಿ.

ಅಧ್ಯಕ್ಷರು.— ತಾವು ಏತಕ್ಕೆ ಸಿಟ್ಟಿಗೇಳುತ್ತೀರಿ.

ಶ್ರೀ ಜಿ. ರಾಜುಗೌಡ.— ಮಂತ್ರಿಗಳಿಗೆ ಈ ಸಬ್ಜೆಕ್ಟ್ ಹೊಸದು. ರಾಜ್ಯದಲ್ಲಿ ಬೈಪ್ರೋಲ್ಟಿನ್ ರೇಷ್ಮೆಯನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿದೆಯೆಂಬುದನ್ನು ಹೇಳಬೇಕು ? ಟಿ. ನರಸೀಪುರದಲ್ಲಿರುವ ನಿಗಮದ ಘಟಕವನ್ನು ಅಂತರರಾಜ್ಯ ಮಾರುಕಟ್ಟೆಯಲ್ಲಿ ಬೈಪ್ರೋಲ್ಟಿನ್ ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕ ಉದ್ದೇಶದಿಂದ ಆಧುನಿಕರಣಗೊಳಿಸಲಾಯಿತು. ಆದರೆ ಆ ಉದ್ದೇಶ ನೆರವೇರಿಲ್ಲ. ಇದರಿಂದ ನಮ್ಮ ಹೊಟ್ಟೆ ಉರಿಯುತ್ತಿದೆ.

ಅಧ್ಯಕ್ಷರು.— ತಾವು ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತೀರಿ. ತಾಳ್ಮೆಯಿಂದ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಲ್ಪ ಸಮಾಧಾನವಾಗಿ ಕೇಳಬೇಕು. ಸನ್ಮಾನ್ಯ ರಾಜುಗೌಡರು, ರೇಷ್ಮೆ ಉದ್ಯಮದ ಬಗ್ಗೆ ಅನುಭವದ ಆಧಾರದ ಮೇಲೆ ಸಿದ್ಧಾಂತ ರೂಪವಾಗಿ ಅಧಿಕಾರವಾಣಿಯಿಂದ ಮಾತನಾಡತಕ್ಕಂಥ ಶಕ್ತಿಯನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಶಹಭಾಶ್‌ಗಿರಿಯನ್ನು ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ — ನನಗೆ ಶಹಭಾಶ್‌ಗಿರಿ ಬೇಡ. ಉತ್ತರ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.— ಟಿ. ನರಸೀಪುರದ ಘಟಕ ಹೊಸ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಅವುಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟವಾಗುವಂತಹ ರೇಷ್ಮೆಯನ್ನು ಉತ್ಪಾದನೆ ಮಾಡಿ. ರೈತರಿಗೆ ಮತ್ತು ಉದ್ಯಮದಲ್ಲಿರುವವರಿಗೆ ಅನುಕೂಲ ಮಾಡಿ ಕೊಡುವ ಸದುದ್ದೇಶದಿಂದ ಸ್ಥಾಪನೆ ಮಾಡಿದ್ದು, ಅದು ಇವತ್ತು ಧೂಮಕೇತು ಆಗಿದೆ. ಅದರಿಂದ ಎಷ್ಟು ಅನುಕೂಲ ಆಗಬೇಕಾಗಿತ್ತೊ, ಅಷ್ಟು ಆಗಿಲ್ಲ. ಅವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ; ಅದು ಪ್ರಾರಂಭವಾಗಿ ಎರಡು ವರ್ಷವಾಗಿದೆ. ಪ್ರೊಡಕ್ಷನ್ ಸ್ಟೇಜಿಗೆ ಬಂದು ೧-೨ ವರ್ಷದಿಂದ ಕೆಲಸ ಮಾಡುತ್ತಿದೆ. ಅದಕ್ಕೆ ಪ್ರಾರಂಭಿಕ ತೊಂದರೆಗಳು ಇತ್ತು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.— ಪ್ರಾರಂಭವಾಗಿ ಎರಡು ವರ್ಷ ಆಗಿದೆ, ಪ್ರಾರಂಭಿಕ ತೊಂದರೆ ಅಂದರೆ ಹೇಗೆ ? ನೀವು ಅಧಿಕಾರಕ್ಕೆ ಬಂದು ೫ ವರ್ಷವಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.— ಇದು ಪ್ರೊಡಕ್ಷನ್ನಿಗೆ ಬಂದಿದ್ದು ಇತ್ತೀಚೆಗೆ. ಅವರ ಮನಸ್ಸಿನ ವ್ಯಾಕುಲತೆ ಏನು ಎಂದರೆ ಅದು ನಷ್ಟ ಅನುಭವಿಸುತ್ತಿದೆ. ರೈತರಿಗೆ ಆಗಬೇಕಾದ ಅನುಕೂಲವಾಗಿಲ್ಲ ಎಂಬುದು ಅವರ ವಾದವನ್ನು ಒಪ್ಪಿಕೊಳ್ಳುತ್ತೇನೆ. ಆಗಿರತಕ್ಕ ಲೋಪದೋಷಗಳನ್ನು ತಿದ್ದಿ ಯಾವ ಉದ್ದೇಶಕ್ಕೋಸ್ಕರ ಇದು ಸ್ಥಾಪನೆ ಆಯಿತೊ, ಆ ಉದ್ದೇಶ ಪರಿಪೂರ್ಣವಾಗುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ರಾಜುಗೌಡರಿಗೆ ಕೊಡುತ್ತೇನೆ.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ನಿರ್ದೇಶನದ ಮತ್ತು ಅಭಿವೃದ್ಧಿ ನಿಗಮದ ಶೇರು ವಿಲೇವಾರಿ ಬಗ್ಗೆ

೧೧೬೯. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ತಾನು ಹಣ ಹೂಡಿರುವ ಎಷ್ಟು ಕಂಪನಿಗಳಲ್ಲಿ ಶೇರು ವಿಲೇವಾರಿ ಮಾಡಿದಂತೆ ವಿವಿಧ ಹಣಕಾಸು ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ. (ಪ್ರತಿ ಸಂಸ್ಥೆಯ ಪ್ರತ್ಯೇಕ ವಿವರಗಳನ್ನು ತಿಳಿಸುವುದು)

ಆ) ಈ ಸಂಸ್ಥೆಗಳಲ್ಲಿ ಕೆ.ಎಸ್.ಐ.ಐ.ಡಿ.ಸಿ. ಹೂಡಿರುವ ಹಣದ ಮೊತ್ತವೆಷ್ಟು ?